ಶ್ರೀ ಸಿ.ಆರ್. ಸಗೀರ್ ಅಹಮದ್ : ಯಾವುದೇ ಒಂದು ಜಮೀನಿನ ಅಥವಾ ತೋಟದ ಮಾಲಿಕತ್ವದ ಬಗ್ಗೆ ಸದನದಲ್ಲಿ ತೀರ್ಮಾನ ಮಾಡುವ ಸಾಧ್ಯತೆ ಇದೆಯೇ?

ಅಧ್ಯಕ್ಷರು : ತೀರ್ಮಾನ ಪ್ರಶ್ನೆ ಅಲ್ಲ. ಅದರ ಬಗ್ಗೆ ನಮಗೆ ಉತ್ತರ ಹೇಳಿ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ನಾರಾಯಣ ಸ್ವಾಮಿಯವರೆ, ಡೀಟೇಸ್ಸ ಬೇಕಾಗಿಲ್ಲ ಅದರ ಬಗ್ಗೆ ವಿಚಾರಣೆ ಮಾಡಿ ಎಂದು ಹೇಳಿ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ನಾರಾಯಣಸ್ವಾಮಿಯವರೇ ತಾವು ಏನು ಹೇಳಿದಿರಿ, ಅದರ ಬಗ್ಗೆ ಕ್ಲೀನಾಗಿ ನೋಟು ಹಾಕಿ ನನಗೆ ಇಲ್ಲವೆ ಮಾನ್ಯ ಅಧ್ಯಕ್ಷರ ಮೂಲಕ ಕೊಡಿ ನಾನು ಅದನ್ನು ಪರಿಶೀಲಿಸಿ ನಮ್ಮ ಕೈಯಲ್ಲಿ ಯಾವ ರೀತಿ ನ್ಯಾಯ ಒದಗಿಸಿ ಕೊಡಲಿಕ್ಕೆ ಸಾಧ್ಯ ಇದೆ ಅದನ್ನು ಮಾಡುತ್ತೇನೆ. ವೈಯಕ್ತಿಕ ವಿಷಗಳನ್ನು ಇಲ್ಲಿ ಚರ್ಚೆ ಮಾಡುವುದು ಕಷ್ಟವಾಗುತ್ತದೆ. ಆದರೂ ಅವಿರಗೆ ರಕ್ಷಣೆ ಏನು ಕೊಡಬೇಕು ಅದನ್ನು ಸರ್ಕಾರ ಕಾನೂನಿನಡಿಯಲ್ಲಿ ಮಾಡುತ್ತದೆ.

ಅಧ್ಯಕ್ಷರು : ಆಯಿತು. ಬಿಡಿ ಕೊನೆಯದಾಗಿ ಮಾನ್ಯ ಚೆಲುವರಾಯಸ್ವಾಮಿ ತಾವು ಕೇಳಿ. ನಾವೇನು ಮೂರು ಗಂಟೆಯವರೆಗೆ ಇದನ್ನೇ ಮಾಡೋಣವೆ? ನಾಳೆ ಅವಕಾಶ ಕೊಡುತ್ತೇನೆ ಇವತ್ತೇ ಕೇಳಬೇಕೆನ್ನುವ ಅವಸರ ಏನಿದೆ? ನೀವು ನಾಳೆ ರೈಸ್ ಮಾಡಿ.

ಶ್ರೀ ಎನ್. ಚಲುವರಾಯಸ್ವಾಮಿ : ಅಪರೂಪಕ್ಕೆ ತಮ್ಮನ್ನು ಪ್ರಶ್ನೆ ಕೇಳುವ ಅವಕಾಶ ನನಗೆ ಬಂದಿದೆ.

ಅಧ್ಯಕ್ಷರು : ಮಂತ್ರಿಗಳು ಊಟಕ್ಕೆ ಆಹ್ವಾನಿಸಿದ್ದಾರೆ. ತಾವು ಜ್ಞಾಪಿಸಿದ್ದಕ್ಕೆ ವಂದನೆಗಳು, ಮಾನ್ಯ ಶೆಟ್ಟರ್‌ರವರೇ ಮಂತ್ರಿಗಳು ಊಟಕ್ಕೆ ಆಹ್ವಾನಿಸಿದ್ದಾರೆ, 1-30 ಕ್ಕೆ ಹೋಗಬೇಕಾಗಿತ್ತು, ಹೀಗಾಗಿ ನಾಳೆ ತೆಗೆದುಕೊಳ್ಳೋಣ. ಚೆಲುವರಾಯಸ್ವಾಮಿಯವರೆ ನೋಡಿ ಒಂದೇ ನಿಮಿಷದಲ್ಲಿ ತಾವು ಮುಗಿಸಿ ಬಿಡಿ.

(ಉ) ಮಂಡ್ಯ ನಗರ ಪ್ರದೇಶಲ್ಲಿ ನಿವೇಶನ ಹಂಚುವುದರಲ್ಲಿ ಆಗಿರತಕ್ಕಂಥ ಭ್ರಷ್ಟಾಚಾರದ ಬಗ್ಗೆ

ಶ್ರೀ ಎನ್. ಚೆಲುವರಾಯಸ್ವಾಮಿ (ನಾಗಮಂಗಲ) : ನಗರಾಭಿವೃದ್ಧಿ ಸಚಿವರನ್ನು ತಮ್ಮ ಮೂಲಕ ಪ್ರಶ್ನೆ ಕೇಳಬಯಸುತ್ತೇನೆ. ಮಂಡ್ಯ ನಗರ ಸಭೆಯ ವ್ಯಾಪ್ತಿಯಲ್ಲಿ ಗುತ್ತಲ ಗ್ರಾಮದಲ್ಲಿ ಸರ್ವೇ ನಂಬರ್ 502,504 : 510 ಇನ್ನೂ ಅನೇಕ ಅದಕ್ಕೆ ಸಂಬಂಧಪಟ್ಟ ಸರ್ವೇ ನಂಬರ್‌ಗಳಲ್ಲಿ ನಾಲ್ಕು ಎಕರೆ 15 ಗುಂಟೆಯನ್ನು....

ಶ್ರೀ ಡಿ.ಬಿ. ಚಂದ್ರೇಗೌಡ : ಸರ್ಕಾರದ ಕಾರ್ಯಕಲಾಪಗಳು ಆಗುವುದು ಬೇಡವೆ? ನನಗಂತೂ ಅರ್ಥವೇ ಆಗುತ್ತಿಲ್ಲ.

ಅದ್ಯಕ್ಷರು : ಆಯಿತು ಒಂದು ನಿಮಿಷ ಸದಸ್ಯರು ತಮಾಷೆಗೆ ಹೇಳುತ್ತಾರೆಯೇ? ಅವರ ಕಷ್ಟವನ್ನು ಹೇಳುತ್ತಿದ್ದಾರೆ. ಐಯಾಮ್ ವೆರಿ ಸ್ಸಾರಿ, ಒಂದು ನಿಮಿಷದಲ್ಲಿ ಮುಗಿಸುತ್ತಾರೆಂದರೆ ಅಷ್ಟರಲ್ಲಿ ನೀವು ಎದ್ದು ನಿಂತರೆ ಹೇಗೆ?

ಶ್ರೀ ಡಿ.ಬಿ. ಚಂದ್ರೇಗೌಡ : ಅವರ ಕ್ಷೇತ್ರದ ಕಷ್ಟ ಹೇಳುತ್ತಾರೆ, ಸರ್ಕಾರದ ಕಾರ್ಯಕಲಾಪ ನಡೆಯುವುದು ಬೇಡವೆ?

ಶ್ರೀ ಜಗದೀಶ್ ಶೆಟ್ಟರ್ : ಮೂರು ಬಿಲ್‌ಗಳು ಪಾಸಾಗಿವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಬಜೆಟ್ ಪಾಸಾದ ಮೇಲೆ ಕೌನ್ಸಿಕ್ವೆನ್ಸಿಯಲ್ ಬಿಲ್ ಇಂಟ್ರಡ್ಯೂಸ್ ಮಾಡಿಪಾಸ್ ಮಾಡದೇ ಇದ್ದರೆ ನಾವು ಏಕೆ ಸದನದಲ್ಲಿ ಕುಳಿತಿರಬೇಕು?

ಶ್ರೀ ಜಗದೀಶ್ ಶೆಟ್ಟರ್ : ಅದಕ್ಕೆ ಸಹಕಾರ ಕೊಡುತ್ತೇವೆ. ಬಿಲ್ ಪಾಸ್ ಮಾಡುವುದು ಬೇಡವೆಂದು ಹೇಳಿದ್ದೇವೆಯೇ?

ಅಧ್ಯಕ್ಷರು : ಆಯಿತು ಬೇಗ ಮುಗಿಸಿ.

ಶ್ರೀ ಎನ್ ಚೆಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರುವುದೇನೆಂದರೆ, ಮಂಡ್ಯ ನಗರ ಸಭೆ ವ್ಯಾಪ್ತಿಗೆ ಬರತಕ್ಕಂಥ ಗುತ್ತಲು ಪ್ರದೇಶದ ಸರ್ವೆ ನಂಬರ್ 502 , 504 ಮತ್ತು 510 ಈ ಸರ್ವೆ ನಂಬರಿಗೆ ಸಂಬಂಧಪಟ್ಟಂಥ ಸುಮಾರು 4 ಎಕರೆ 15 ಗುಂಟೆ ಜಮೀನನ್ನು ನಿವೇಶನ ಮಾಡುವುದನ್ನು ಹೊರತುಪಡಿಸಿ ಸದರಿ ಜಾಗವನ್ನು ವಾಣಿಜ್ಯ ಇಲಾಖೆಗೆ ಮೀಸಲಾಗಿಡಲಾಗಿದೆ ಎಂದು ಅಲ್ಲಿನ ಆಯುಕ್ತರು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ಡೀಟೇಲ್ ಆಗಿ ವಿಷಯವನ್ನು ಹೇಳುವುದಕ್ಕೆ ಹೋಗಬೇಡಿ. ವಿಷಯವನ್ನು ಮೆನ್‌ಷನ್ ಮಾಡಿದರೆ ಸಾಕು.

ಶ್ರೀ ಎನ್ ಚೆಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ ಅಲ್ಲಿನ ಅಧ್ಯಕ್ಷರು ಪರ್ಮಿಷನ್ ಕೊಟ್ಟಿದ್ದಾರೆ. ಇದರಿಂದ ಸಾಕಷ್ಟು ದುರುಪಯೋಗ ಅಲ್ಲಿ ಆಗುತ್ತಿದೆ.

ಅಧ್ಯಕ್ಷರು : 5 ಪುಟಗಳನ್ನು ಇಲ್ಲಿ ಓದುವುದಕ್ಕೆ ಆಗುತ್ತದೆಯೇ? ವಿಷಯವನ್ನು ಪ್ರಸ್ತಾಪ ಮಾಡಿ, ಇದನ್ನು ಸರಿಪಡಿಸಿ ಎಂದು ಕೇಳಿದರೆ ಸಾಕು.

ಶ್ರೀ ಎನ್ ಚೆಲುವರಾಯಸ್ವಾಮಿ : ತಾವು ಅವಶ್ಯಕತೆ ಇಲ್ಲದೇ ಇರುವುದಕ್ಕೆಲ್ಲಾ ಅವಕಾಶ ಕೊಡುತ್ತೀರಿ. ಆದರೆ, ಬಹಳ ಅವಶ್ಯಕತೆ ಇರತಕ್ಕಂಥಕ್ಕೆ ಅವಕಾಶವೇ ಕೊಡುತ್ತಿಲ್ಲ. ಈಗ ನಾನು ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು : ಸಂಕ್ಷಿಪ್ತವಾಗಿ ಹೇಳಿ ಮುಗಿಸಿ.

ಶ್ರೀ ಎನ್. ಚೆಲುವರಾಯಸ್ವಾಮಿ : ನಾನು ಇನ್ನು ವಿಷಯವನ್ನೇ ಪ್ರಸ್ತಾಪ ಮಾಡಿಲ್ಲ.

(ಗೊಂದಲ)

ಶ್ರೀ ವಿ. ಕೃಷ್ಣಪ್ಪ : ಅವರಿನ್ನು 5 ನಿಮಿಷ ಕೂಡ ಮಾತನಾಡಿಲ್ಲ.

ಅಧ್ಯಕ್ಷರು : ಮಾನ್ಯ ಕೃಷ್ಣಪ್ಪನವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎನ್. ಚೆಲುವರಾಯಸ್ವಾಮಿ : ನಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ತಾವು ಹೀಗೆ ಮಾಡಿದರೆ ಹೇಗೆ? ನಾನು ಈಗಾಗಲೇ ಹೇಳಿರತಕ್ಕಂಥ ಸರ್ವೆ ನಂಬರಿನ ಪ್ರದೇಶವನ್ನು ವಾಣಿಜ್ಯ ಉಪಯೋಗಕ್ಕಾಗಿ ಮೀಸಲಾಗಿಟ್ಟಿರುವುದರಿಂದ ಇದನ್ನು ನಿವೇಶನ ಮಾಡಿ ಹಂಚಬಾರದು. ಒಂದು ವೇಳೆ ಸದರಿ ಜಾಗದಲ್ಲಿ ನಿವೇಶನ ಮಾಡಿ ಹಂಚಿದರೆ ಮತ್ತು ನಿವೇಶನ ತೆಗೆದುಕೊಂಡಿರುವರು ಇಲ್ಲಿಗೆ ಬಂದರೆ ಮುಂದೆ ಇದಕ್ಕೆ ಪರವಾನಿಗೆ ಕೊಡುವುದಿಲ್ಲ.

ಇದರಿಂದ ತೊಂದರೆಯಾಗುತ್ತದೆ ಎಂದು ಅಲ್ಲಿನ ಆಯುಕ್ತರು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ, ಎರಡು ತಿಂಗಳ ನಂತರ, ಅಲ್ಲಿನ ಅಧ್ಯಕ್ಷರು, ಇದಕ್ಕೆ ಪರವಾನಿಗೆ ಕೊಟ್ಟು ಇದನ್ನು ನಿವೇಶನ ಮಾಡಬಹುದೆಂದು ಹೇಳಿದ್ದಾರೆ. ಈ ಒಂದು ಗೊಂದಲದಲ್ಲಿ ಅಲ್ಲಿ ಭ್ರಷ್ಟಾಚಾರಕ್ಕೆ ಕಾರಣವಾಗಿರುತ್ತದೆ.

ಅಧ್ಯಕ್ಷರು : ತಾವು ಡೀಟೆಲ್ಸ್ ಆಗಿ ಹೇಳುವುದಕ್ಕೆ ಹೋಗಬೇಡಿ. ಸದರಿ ವಿಷಯಕ್ಕೆ ಸಂಬಂಧಪಟ್ಟಂಥ ಮಾಹಿತಿಯನ್ನು ಅವರಿಗೆ ಕಳುಹಿಸಿ ಕೊಡಿ. ನಿಮ್ಮ ತೊಂದರೆಯನ್ನು ಅವರು ಸಾಲ್ವ ಮಾಡುತ್ತಾರೆ.

ಶ್ರೀ ಎನ್. ಚಿಲುವರಾಯಸ್ವಾಮಿ : ತಾವು ಬೇಡ ಎಂದರೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಪ್ರಸ್ತಾಪ ಮಾಡುವುದಕ್ಕೂ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಬಹಳ ಪ್ರಮುಖವಾದಂಥ ಬೇರೆ ಬೇರೆ ವಿಷಯಗಳು ಇನ್ನೂ ಸಾಕಷ್ಟಿವೆ.

ಶ್ರೀ ಎನ್. ಚಿಲುವರಾಯಸ್ವಾಮಿ : ಒಂದು ನಿಮಿಷ ಹೇಳುವುದಕ್ಕೂ ಸಹ ಅವಕಾಶ ಕೊಡುತ್ತಿಲ್ಲ.

ಅಧ್ಯಕ್ಷರು : ನಾನು ಹೇಳುವುದನ್ನು ತಾವು ಕೇಳಬೇಕು.

ಶ್ರೀ ಎನ್. ಚಿಲುವರಾಯಸ್ವಾಮಿ : ಮಂಡ್ಯ ನಗರದಲ್ಲಿ ಆಗಿರತಕ್ಕಂಥ ವಿಷಯಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ಅಲ್ಲಿ ಸೈಟ್ ವಿತರಣೆಯಲ್ಲಿ ಆಗಿರತಕ್ಕಂಥ ಭ್ರಷ್ಟಾಚಾರದ ಬಗ್ಗೆ ತನಿಖೆ ಮಾಡಿಲಿಲ್ಲ ಆಗುತ್ತಿರುವ ಅವ್ಯವಹಾರವನ್ನು ನಿಲ್ಲಿಸಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಈಗ ಸದನವನ್ನು 3 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

(ಸದನವು 1 ಗಂಟೆ 52 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 3.30 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ 3.40ಕ್ಕೆ ಪ್ರಾರಂಭಗೊಂಡಿತು ಸನ್ಮಾನ್ಯ ಉಪಾಧ್ಯಕ್ಷರು ಶ್ರೀ ಮನೋಹರ ಹೆಚ್. ತಹಸೀಲ್ದಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

6. ನಿಯಮ - 69 ರ ಮೇರೆಗೆ ಅಲ್ಪ ಕಾಲಾವದಿ ಚರ್ಚೆ

ವಿಷಯ : ಬೆಂಗಳೂರು ಜಲಮಂಡಳಿಯನ್ನು ಖಾಸಗೀಕರಣಗೊಳಿಸುವುದರಿಂದ ಸಾರ್ಕರದ ಬೊಕ್ಕಸಕ್ಕೆ ಹಾಗೂ ಜನತೆಗೆ ಹೆಚ್ಚಿನ ಹೊರೆಯಾಗುವುದರ ಬಗ್ಗೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪಾಧ್ಯಕ್ಷರೆ, ಈ ವಿಷಯವನ್ನು ನಿಲುವಳಿ ಸೂಚನೆಯ ಮೂಲಕ ನಾವು ಚರ್ಚಿಸಬೇಕೆಂದು ಆಪೇಕ್ಷೆಯನ್ನು ಪಟ್ಟಿದ್ದೆವು ಆದರೆ ಸಭಾಧ್ಯಕ್ಷರು ಇದನ್ನು ನಿಯಮ - 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ, ತಮಗೆ ಧನ್ಯವಾದಗಳು. ಮಾನ್ಯ ಚಂದ್ರೇಗೌಡರೆ, ನನ್ನದು ಒಂದು ವಿಚಿತ್ರವಾದ ಸ್ಥಿತಿ ನನ್ನ ದೇಹದ ಮೇಲೆ ಆರೋಗ್ಯನೋ ಆರೋಗ್ಯದ ಮೇಲೆ ದೇಹನೋ ಗೊತ್ತಿಲ್ಲ. ನನಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆವು ಈಗ ಅದನ್ನು ಕನ್ವರ್ಟ್ ಮಾಡಿದ್ದಾರೆ ಏಕೆಂದರೆ ಇದರ ಮೇಲೆ ಜಾಸ್ತಿ ಮಾತನಾಡಬಾರದು ಎಂದು ಇರಬಹುದು. ನಾನೂ ಕೂಡ ನಿಲುವಳಿ ಸೂಚನೆಯನ್ನು 69ಕ್ಕೆ ಕನ್‌ವರ್ಟ್ ಮಾಡಿ ಈ ವಿಚಾರದ ಬಗ್ಗೆ ಮಾತನಾಡುವುದಕ್ಕೆ